# ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ

# DIRECTORATE OF MEDICAL EDUCATION

ಆನಂದರಾವ್ ವೃತ್ತ, ಬೆಂಗಳೂರು-9.
Ananda Rao Circle, Bangalore-9.
Email:dmekarnataka@yahoo.com.n
Ph: 080-22870060

ಸಂಖ್ಯೆ: ವೈಶಿ/ಎಸ್ಆರ್ಓ(1)/29/2020 21 Date: 22-07-2021

## ಅಧಿಸೂಚನೆ

**ವಿಷಯ:** ಕೊಪ್ಪಳ.ವೈ.ವಿ.ಸಂ., ಗದಗವೈ.ವಿ.ಸಂ., ಕಾರವಾರ.ವೈ.ವಿ.ಸಂ, ಇಂದಿರಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ, ಬೆಂಗಳೂರು ಇಲ್ಲಿನ ಖಾಯಂ ನಿರ್ದೇಶಕರ ಹುದ್ದೆಗೆ ಹೊರಡಿಸಿದ್ದ ಅಧಿಸೂಚನೆ ರದ್ದುಪಡಿಸುವ ಬಗ್ಗೆ,

**ಉಲ್ಲೇಖ:** ಸರ್ಕಾರದ ಪತ್ರ ಸಂಖ್ಯೆ: ಎಂಇಡಿ/2/ಎಂಪಿಎಸ್/2020, ದಿನಾಂಕ: 23-06-2020,

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕೊಪ್ಪಳ.ವೈ.ವಿ.ಸಂ., ಗದಗವೈ.ವಿ.ಸಂ., ಕಾರವಾರ.ವೈ.ವಿ.ಸಂ, ಮತ್ತು ಇಂದಿರಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ, ಬೆಂಗಳೂರು ಸಂಸ್ಥೆಗಳಲ್ಲಿ ಖಾಲಿ ಇರುವ ಖಾಯಂ ನಿರ್ದೇಶಕರ ಹುದ್ದೆಯ ನೇಮಕಾತಿಗಾಗಿ ದಿನಾಂಕ: 23-11-2020ರಂದು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 18-12-2020ಕ್ಕೆ ನಿಗದಿಪಡಿಸಲಾಗಿತ್ತು. ಮತ್ತು ದಿನಾಂಕ: 07-12-2020ರಂದು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ತಿದ್ದುಪಡಿ ಅಧಿಸೂಚನೆ ಹೊರಡಿಸಲಾಗಿರುತ್ತದೆ.

ಮುಂದುವರೆದು ಅರ್ಜಿ ಆಹ್ವಾನಿಸಿದ ನಂತರ ಸಾಮಾನ್ಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು (Comman Cadre & Recruitment) ರೂಪಿಸುವ ಪ್ರಕ್ರಿಯೆಯು ಚಾಲನೆಗೆ ಬಂದಿರುವುದರಿಂದ ಇದುವರೆಗೂ ಮೇಲಿನ ಯಾವುದೇ ಸಂಸ್ಥೆಗಳಿಗೆ ಸಂದರ್ಶನಕ್ಕೆ ಕರೆ ನೀಡಿರುವುದಿಲ್ಲ.

ಸಾಮಾನ್ಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು (Comman Cadre & Recruitment) ರೂಪಿಸಿದ ನಂತರ ಸದರಿ ಸಂಸ್ಥೆಗಳಿಗೆ ಸಾಮಾನ್ಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಹೊಸದಾಗಿ ದಿನಾಂಕ ನಿಗಧಿಪಡಿಸಿ ಅಧಿಸೂಚನೆ ಹೊರಡಿಸಿ ಅರ್ಜಿ ಆಹ್ವಾನಿಸಬೇಕಾಗಿರುವುದರಿಂದ ಮೇಲಿನ ಸಂಸ್ಥೆಗಳಿಗೆ ದಿನಾಂಕ:23-11-2020ರಂದು ಹೊರಡಿಸಿದ್ದ ಅಧಿಸೂಚನೆ ಮತ್ತು 07-12-2020ರಂದು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಹೊರಡಿಸಿದ್ದ ತಿದ್ದುಪಡಿ ಅಧಿಸೂಚನೆಯನ್ನು ರದ್ದುಪಡಿಸಲಾಗಿದೆ.

ನಿರ್ದೇಶಕರು, ವೈದ್ಯಕೀಯ ಶಿಕ್ಷಣ.